ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರಃ 366/2019
ಡಿ.ಡಬ್ಲ್ಯೂ : 1

ದಿನಾಂಕಃ 02-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ ಶ್ರೀ ಎಮ್ ಎಮ್ ಎಚ್. ಯವರಿಂದ

1. ನಮ್ಮ ಮನೆ ಬ್ರಹ್ಮಾವರ ತಾಲೂಕಿನ ಚಾಂತಾರು. ದಾವ ಸ್ಥಳದಿಂದ ನಮ್ಮ ಮನೆ ಸುಮಾರು 13 ಕಿ.ಮೀ ಅಂತರದಲ್ಲಿರುತ್ತದೆ. ದಾವಾ ಸ್ಥಳದ ಸುತ್ತಮುತ್ತ ನನ್ನ ಹಕ್ಕಿನ ಜಮೀನುಗಳು ಇರುವುದಿಲ್ಲ. ಸರ್ವೆ ನಂಬರ್ 45/4 ರಲ್ಲಿ ಒಟ್ಟು ವಿಸ್ತೀರ್ಣ 62 ಸೆಂಟ್ಸ್ ಇರುತ್ತದೆ. ಸರ್ವೆ ನಂಬರ್ 45/4 ರಲ್ಲಿ ದಾವಾ ಸ್ಥಳದ ಯಾವ ಅಂಶ ಎಂದರೆ ಸಾಕ್ಷಿ ಉತ್ತರಾಂಶ ಎಂದು ನುಡಿಯುತ್ತಾರೆ. ದಾವಾ ಸ್ಥಳ 31 ಸೆಂಟ್ಸ್ ಸ್ಥಳಕ್ಕಿಂತ ಉಳಿದ 31 ಸೆಂಟ್ಸ್ ಸ್ಥಳ 2 ರಿಂದ 3 ಅಡಿ ಎತ್ತರದಲ್ಲಿರುತ್ತದೆ.

2. ನಾನು 2012 ರಲ್ಲಿ ಸರ್ವೆ ನಂಬರ್ 45/4 ರಲ್ಲಿ 62 ಸೆಂಟ್ಸ್ ಜಾಗವನ್ನು ಖರೀದಿ ಮಾಡಿರುತ್ತೇನೆ. ಆ ಸ್ಥಳವನ್ನು ನಾನು ಸುಬ್ರಮಣ್ಯ ದಾರೇಶ್‌ರವರಿಂದ ಖರೀದಿ ಮಾಡಿರುತ್ತೇನೆ. ಆ ದಾಖಲೆಯನ್ನು ನಿ.ಡಿ.5 ರಂತೆ ಹಾಜರು ಪಡಿಸಿರುತ್ತೇನೆ. ದಾರೇಶ್ ರವರು ಶ್ರೀನಿವಾಸ ಅಡಿಗರವರಿಂದ ಖರೀದಿ ಮಾಡಿರುತ್ತಾರೆ. ಯಾವ ವರ್ಷ ಅಂತ ನೆನಪಿರುವುದಿಲ್ಲ. ನಾನು ಜಮೀನನ್ನು ಖರೀದಿಸುವ ಪೂರ್ವದಲ್ಲಿ ದಾಖಲೆಗಳು ಸರಿ ಇರುತ್ತದಾ ಎಂಬುದರ ಬಗ್ಗೆ ವಕಿಲರಲ್ಲಿ ತೋರಿಸಿರುತ್ತೇನೆ.

3. ನಾನು ಸುಬ್ರಮಣ್ಯ ದಾರೇಶ್ ರವರು ಖರೀದಿ ಮಾಡಿದಂತಹ ಕ್ರಯ ಪತ್ರವನ್ನು ಪರಿಶೀಲನೆ ಮಾಡಿರುತ್ತೇನೆ. ಸುಬ್ರಮಣ್ಯ ದಾರೇಶ್ ರವರಿಗೆ ಸದರಿ ಆಸ್ತಿ ಶ್ರೀನಿವಾಸ ಅಡಿಗರವರಿಂದ ಬಂದಿರುತ್ತದೆ. ಆ ದಾಖಲೆಯನ್ನು ಪರಿಶೀಲಿಸುವಂತೆ ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ಶ್ರೀನಿವಾಸ ಅಡಿಗರವರಿಗೆ ಶೀನಪ್ಪ ಶೆಟ್ಟಿಯವರು ಖರೀದಿಗೆ ಕೊಟ್ಟಿರುತ್ತಾರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.4 ರ ದಾಖಲೆಯನ್ನು ಸಾಕ್ಷಿ ನೋಡಿ ಆ ದಾಖಲೆ ಬಗ್ಗೆ ನನಗೆ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ.

4. ಶ್ರೀನಿವಾಸ ಅಡಿಗರವರಿಗೆ ಏನು ಹಕ್ಕು ಇರುತ್ತದೋ ಆ ಹಕ್ಕು ನಮಗೆ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂಬರ್ 45/4 ರಲ್ಲಿ ಶ್ರೀನಿವಾಸ ಅಡಿಗರವರಿಗೆ ಹಕ್ಕು ಇದ್ದದ್ದು ಪಶ್ಚಿಮದ 31 ಸೆಂಟ್ಸ್ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ 31 ಸೆಂಟ್ಸ್ ಜಾಗ ಆವೆ ಮಣ್ಣು ತೆಗೆದ ಜಾಗ ಎಂದರೆ ಸಾಕ್ಷಿ 61 ಸೆಂಟ್ಸ್ ಜಾಗದಲ್ಲಿ ಮಣ್ಣು ತೆಗೆದಿತ್ತು ಎಂದು ನುಡಿಯುತ್ತಾರೆ. ಶ್ರೀನಿವಾಸ ಅಡಿಗರಿಗೆ 62 ನೇ ಇಸವಿಯಲ್ಲಿ ಏನು ಹಕ್ಕು ಬಂದಿರುತ್ತದೆ ಎಂದು ಮನದಟ್ಟು ಮಾಡಿಕೊಂಡು ಸುಬ್ರಮಣ್ಯ ದಾರೇಶ್ ರವರಿಂದ ಖರೀದಿ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಶ್ರೀನಿವಾಸ ಅಡಿಗರವರಿಗೆ ಸರ್ವೆ ನಂಬರ್ 45/4 ರಲ್ಲಿ 31 ಸೆಂಟ್ಸ್ ಜಾಗ ಮಾತ್ರ ಸುಬ್ರಮಣ್ಯ ದಾರೇಶ್ ರವರಿಗೆ ಖರೀದಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ 62 ಸೆಂಟ್ಸ್ ಜಾಗವನ್ನು ಖರೀದಿಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

5. ವಾದಿಯವರು ದಾವಾ ಸ್ವತ್ತಿನ 31 ಸೆಂಟ್ಸ್ ಜಾಗ ಹೇಗೆ ಬಂದಿರುತ್ತದೆ ಎಂದು ದಾಖಲೆಯನ್ನು ಹಾಜರುಪಡಿಸಿರುತ್ತಾರೆ ತಾವು ನೋಡಿರುತ್ತೀರಾ ಎಂದರೆ ಸಾಕ್ಷಿ ನಮ್ಮ ವಕೀಲರು ನೋಡಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 23-01-1941 ರ ದಸ್ತಾವೇಜಿನ ಪ್ರಕಾರ ದಾವಾ ಸ್ಥಳದ ಮೇಲೆ ವಾದಿಯರ ಕುಟುಂದವರಿಗೆ ನಿ.ಪಿ.3 ರಂತೆ ಹಕ್ಕು ಬಂದಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.3 ರಂತೆ ವಾದಿಯವರಿಗೆ 31 ಸೆಂಟ್ಸ್ ಪೂರ್ವದ ಅಂಶ ಬಂದಿರುತ್ತದೆ ಎಂದು ನನಗೆ ವಕೀಲರು ಹೇಳಿರುತ್ತಾರೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ.

6. ಪೂರ್ವದ ಅಂಶ 31 ಸೆಂಟ್ಸ್ ಜಾಗ 1941 ರ ಪೂರ್ವದಿಂದಲೂ ಸಹ ಪಶ್ಚಿಮದ ಅಂಶಕ್ಕಿಂತ ಎತ್ತರದಲ್ಲಿ ಇದ್ದ ಸ್ಥಳ ಎಂದರೆ ಸಾಕ್ಷಿ ನಾನು ಖರೀದಿ ಮಾಡಿದ ನಂತರ ಅದು ಡೌನ್ ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ಥಳಕ್ಕೆ ತಾಗಿ ವಾದಿಯವರ ಬೇರೆ ಜಮೀನು ಇರುತ್ತದೆ ಎಂದರೆ ಸರಿ. ದಾವಾ ಸ್ಥಳದಲ್ಲಿ ಈಗ ಒಟ್ಟು 25 ರಿಂದ 30 ತೆಂಗಿನ ಮರಗಳು ಇರಬಹುದು. ನಿ.ಪಿ.10 ಮತ್ತು ನಿ.ಪಿ. 11 ರ ಪೋಟೋಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ನಿ.ಪಿ. 10 ಮತ್ತು 11 ರಲ್ಲಿ ತೋರುವ ಪೂರ್ವದ ಸ್ಥಳದಲ್ಲಿ ತೆಂಗಿನ ಸಸಿಗಳು ಇರುವಂತದ್ದು ಎಂದರೆ ಸರಿ. ತೆಂಗಿನ ಸಸಿಗಳಿಂದ ಪಶ್ಚಿಮಕ್ಕೆ ಇರುವಂತದ್ದು ಮಣ್ಣು ಹಾಕಿ ಏರಿಸಿದ ಸ್ಥಳ ಎಂದರೆ ಸರಿ. ಆ ಮಣ್ಣನ್ನು ಹಾಕಿ ಏರಿಸಿದ್ದು ನಾನು ಎಂದರೆ ಸರಿ.

7. ಸದರಿ ತೆಂಗಿನ ಸಸಿಗಳಿಗೆ ನೀರಿನ ಮೂಲ ಎಂದರೆ ಹೊಳೆ. ಆ ತೆಂಗಿನ ಸಸಿ ನೆಟ್ಟಿದ್ದು ಹಾಗೂ ನೀರು ಹಾಕುವುದು ವಾದಿ ಎಂದರೆ ಸರಿಯಲ್ಲ, ಸಾಕ್ಷಿ ನಾನೇ ಮಾಡಿರುತ್ತೇನೆ ಎಂದು

ನುಡಿಯುತ್ತಾರೆ. ದಾವಾ ಸ್ಥಳದ ಹಳೆಯ RTC ಯನ್ನು ನೋಡಿದ ನೆನಪಿರುವುದಿಲ್ಲ. ಸಾಕ್ಷಿಗೆ ನಿ.ಪಿ.1 ರ 1967-68 ರ RTC ಯನ್ನು ತೋರಿಸಿದ್ದು, ಸಾಕ್ಷಿ ದಾಖಲೆ ನೋಡಿ 31 ಸೆಂಟ್ಸ್ ಜಾಗ ವಾದಿಯವರ ಕುಟುಂಬದವರ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ದಿನಾಂಕ 20-03-1989 ರಲ್ಲಿ ಸುಬ್ರಮಣ್ಯ ದಾರೇಶ್ ರವರಿಗೆ ಆದ ಕ್ರಯ ಪತ್ರದಲ್ಲಿ ಪೂರ್ತಿ ವಿಸ್ತೀರ್ಣ 62 ಸೆಂಟ್ಸ್ ಜಾಗವನ್ನು ದಾರೇಶ್ ರವರ ಹೆಸರಿಗೆ RTC ಬದಲಾಯಿಸಿರುತ್ತಾರೆ ಎಂದರೆ ಸರಿ.

8. ನಾನು ಆ ಪಹಣಿ ಪತ್ರಿಕೆಯನ್ನು ನಿ.ಡಿ. 2 ಅಂತ ಹಾಜರು ಪಡಿಸಿರುತ್ತೇನೆ. ನಾನು RTC ಹಾಗೂ EC ಯನ್ನು ನೋಡಿ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. ನಾನು ಕ್ರಯ ಮಾಡುವಾಗ ನಿ.ಪಿ.4 ರ 1963 ನೇ ಇಸವಿಯ ದಸ್ತಾವೇಜನ್ನು ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ವಕೀಲರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.4 ರ ದಾಖಲೆಯನ್ನು ಪರಿಶೀಲನೆ ಮಾಡಿದ್ದರೆ 31 ಸೆಂಟ್ಸ್ ಖರೀದಿ ಮಾಡುತ್ತಿದ್ದೆ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ.

9. ನಾನು ಸರ್ವೆ ನಂಬರ್ 45/4 ರಲ್ಲಿ ಮೂಲಿ ಹಕ್ಕನ್ನು ಖರೀದಿಸಿರುತ್ತೇನೋ ಅಥವಾ ಮೂಲಗೇಣಿ ಹಕ್ಕನ್ನು ಖರೀದಿಸಿರುತ್ತೇನೋ ಬಗ್ಗೆ ನನಗೆ ಗೊತ್ತಿರುವುದಿಲ್ಲ ಸರ್ವೆ ನಂಬರ್ 45/4 ರ ಪೂರ್ವದ ಅಂತ ನಾಗಪ್ಪ ಮಲ್ಯರವರ ಮೂಲಿ ಅಂಶದ ಹಕ್ಕಾಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯವರ ಕುಟುಂಬದವರಿಗೆ ಮೂಲಗೇಣಿ ಹಕ್ಕು ಇದ್ದದ್ದನ್ನು 1941 ರ ಪತ್ರದ ಪ್ರಕಾರ ಮೂಲಿ ಹಕ್ಕನ್ನು ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವೆ ಆದ ನಂತರ ಈ ಎಲ್ಲಾ ವಿಚಾರ ನನ್ನ ಗಮನಕ್ಕೆ ಬಂದಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೂರ್ವದ 31 ಸೆಂಟ್ಸ್ ಜಾಗ ವಾದಿಯವರ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಸ್ವಾಧೀನದಲ್ಲಿ ಆ ಜಾಗ ಇರುವುದಿಲ್ಲ ಎಂದರೆ ಸರಿಯಲ್ಲ.

10. ಮೊಳಹಳ್ಳಿ ಸೇವಾ ಸಹಕಾರಿ ಸಂಘದಲ್ಲಿ ಸಾಲ ಮಾಡುವಾಗ ದಾವಾ ಸ್ವತ್ತಿನ RTC ಕೊಟ್ಟಿರುತ್ತೇನೆ. ನ್ಯಾಯಲಯದಲ್ಲಿ ದಾವಾ ಸಲ್ಲಿಸುವ ಪೂರ್ವದಲ್ಲಿ ಸಹಾಯಕ ಉಪವಿಭಾಗಾಧಿಕಾರಿಯವರ ಮುಂದೆ ಖಾತಾ ಬದಲಾವಣೆಗೆ ಸಂಬಂಧಪಟ್ಟಂತೆ ಪ್ರಕರಣ ನಡೆದಿತ್ತು ಎಂದರೆ ಸರಿ. ಆ ಪ್ರಾಧಿಕಾರದಲ್ಲಿ ಆಸ್ತಿಯ ಹಕ್ಕಿನ ವಿಚಾರ ಇರುವುದರಿಂದ ಸಿವಿಲ್ ನ್ಯಾಯಲಯದಲ್ಲಿ ನೋಡಿಕೊಳ್ಳಿ ಎಂದು ತೀರ್ಪಾಗಿರುತ್ತದ ಎಂದರೆ ಸರಿ. ದಿನಾಂಕ 12-09-2019 ರಲ್ಲಿ ನಾನು ವಾದಿಯವರ ಜಾಗದಲ್ಲಿ ಬೇಲಿ ಹಾಕಲು

ಹೋದಾಗ ತಕರಾರು ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಅಳತೆಗೆ ಬಂದಾಗ ತಕರಾರು ಆಗಿರುತ್ತದೆ ಎಂದು ನುಡಿಯುತ್ತಾರೆ. ಅಳತೆಗೆ ನಾನೇ ಅರ್ಜಿ ಕೊಟ್ಟಿದ್ದೆ. ದಾವಾ ಸ್ಥಳದಲ್ಲಿ ನನಗೆ ಹಕ್ಕು ಇರುವುದಿಲ್ಲ ಹಾಗೂ ನಾನು ಸ್ವಾಧೀನದಲ್ಲಿ ಇದ್ದಿದ್ದು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ